ಆ) ಹೌದು.

ಇ) ಕಳೆದ ಒಂದು ವರ್ಷದಿಂದ ಕೇಂದ್ರ ಸರ್ಕಾರವು ಅಕ್ಕಿ, ಗೋಧಿ ಮತ್ತು ಸೀಮೆಎಣ್ಣೆಗಳ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಿಲ್ಲ. ಬದಲಾಗಿ ಡಿಸೆಂಬರ್ 1991ರಿಂದ ಅಕ್ಕಿ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆ. ರಾಜ್ಯದ ಪಡಿತರ ಚೀಟಿದಾರರಿಗೆ ವಿತರಿಸಲು ಅವಶ್ಯಕವಿರುವ ಪ್ರಮಾಣವನ್ನು ಹಂಚಿಕೆ ಮಾಡಲು ಕೇಂದ್ರ ಸರ್ಕಾರವನ್ನು ಸತತವಾಗಿ ಒತ್ತಾಯಿಸಲಾಗಿದೆ.

ಆದರೂ ಈಗಿರುವ ಹಂಚಿಕೆ ಪ್ರಮಾಣದಲ್ಲಿ ಸರಿದೂಗಿಸಿ ಚನ್ನಪಟ್ಟಣ ಟೌನಿನಲ್ಲಿರುವ ಹೆಚ್ಚುವರಿ ಪಡಿತರ ಚೀಟಿದಾರರಿಗೆ ಅಗತ್ಯ ವಸ್ತುಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ರೈತರುಗಳ ಸಾಲ ದಾಖಲಾತಿಗಳ ವಾಪಸಾತಿ

422 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಹಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1987 ನೇ ಇಸವಿಯಲ್ಲಿ ಬಡ್ಡಿ ಮನ್ನಾ ಆದಾಗ ಸಹಕಾರ ಸಂಘಗಳಿಗೆ ಅಸಲಿನ ಪೂರ್ತಿ ಹಣವನ್ನು ಪಾವತಿ ಮಾಡಿದ್ದಂತಹ ರೈತರುಗಳಿಗೆ ಅವರು ಆಧಾರವಾಗಿಟ್ಟಿದ್ದ ದಾಖಲಾತಿಗಳನ್ನು ಹಿಂತಿರುಗಿಸಲಾಗಿದೆಯೇ?*

ಆ) *ಇಲ್ಲವಾದಲ್ಲಿ ಹಿಂತಿರುಗಿಸದಿರಲು ಕಾರಣವೇನು?*

ಇ) *ಎಷ್ಟು ಅವಧಿಯಲ್ಲಿ ಆ ದಾಖಲಾತಿಗಳನ್ನೆಲ್ಲಾ ಹಿಂತಿರುಗಿಸಲಾಗುವುದು?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಹೌದು.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಾಲಮನ್ನಾ ಘೋಷಣೆಯಿಂದ ಸಹಕಾರಸಂಘಗಳ ನಿಷ್ಕ್ರಿಯತೆ.

423 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಸಹಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *10,000 ರೂಪಾಯಿವರೆಗಿನ ಸಹಕಾರ ಸಂಘಗಳ ಸಾಲ ಮನ್ನಾ ಮಾಡುತ್ತೇವೆಂಬ ರಾಜಕೀಯ ಘೋಷಣೆಯಿಂದಾಗಿ ರೈತ ಸಾಲ ಕಟ್ಟದೆ ನಿರಾಶನಾಗಿದ್ದು ಸಾಲ ಮನ್ನವೂ ಆಗದೆ ರಾಜ್ಯದ ಎಲ್ಲಾ ಸಹಕಾರ ಸಂಘಗಳೂ ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *10,000 ರೂಪಾಯಿವರೆಗಿನ ಸಾಲ ಮನ್ನಾ ವಿಚಾರದಲ್ಲಿ ಸರ್ಕಾರದ ಖಚಿತ ನಿಲುವೇನು?*

ಇ) *ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಬಂದಿದೆ.

ಆ) 10,000 ರೂಪಾಯಿಯವರೆಗೆ ಸಾಲ ಮನ್ನಾ ಯೋಜನೆ ಈಗಾಗಲೇ ದಿನಾಂಕ 31-3-91ಕ್ಕೆ ಮುಕ್ತಾಯವಾಗಿದ್ದು ಇದನ್ನು ವಿಸ್ತರಿಸುವ ಯೋಜನೆಯಿಲ್ಲ.